ಸುಮಾರು ಎಂಟೂವರೆ ದಶಕಗಳ ಹಿಂದಿನ ಮಾತು. ಸಂಪ್ರದಾಯ ನಿಷ್ಠರ, ಕಂದಾಚಾರದವರ, ಗುರು ಮಠಗಳ ಮುಷ್ಟಿಯಲ್ಲಿ ಸಮಾಜ ನಲುಗುತ್ತಿದ್ದ ಕಾಲವದು. ಧರ್ಮದ ಹೆಸರಲ್ಲಿ, ಪರಂಪರೆಯ ಹೆಸರಲ್ಲಿ ಕುರುಡು ಸಂಪ್ರದಾಯವನ್ನು ಆಚರಿಸಿಕೊಂಡು ಬರುತ್ತಿದ್ದ ದಿನಗಳವು. ಅಂತಹ ಕಾಲಘಟ್ಟದಲ್ಲಿ ಆಮಂತ್ರಣ ಪತ್ರಿಕೆಯೊಂದು ಹವ್ಯಕ ಬ್ರಾಹ್ಮಣ ಸಮಾಜದ ಮನೆ ಮನೆಗೂ ತಲುಪಿತು.

ಅಕದಾಸ ಗಣಪತಿ ಭಟ್ಟನೆಂಬ ವಿದುರನಾದ ನಾನು ನಂದಿತಳೆಯ ಅಂಚೆ ತಿಮ್ಮಯ್ಯನವರ ಮಗಳಾದ ವಿಧವೆ ಮಹಂಕಾಳಿಯನ್ನು ಲಗ್ನವಾಗಲು ನಿಶ್ಚಯಿಸಿರುತ್ತೇನೆ. ಮಂಜುಗುಣಿ ಕ್ಷೇತ್ರದಲ್ಲಿ 23–12–1932ರಂದು ನಡೆಯುವ ಈ ಶುಭಕಾರ್ಯಕ್ಕೆ ತಾವೆಲ್ಲಾ ಆಗಮಿಸಬೇಕೆಂದು ವಿನಂತಿಸುತ್ತೇನೆ.

ವಿವಾಹದ ಆಹ್ವಾನಪತ್ರಿಕೆ ಇಡೀ ಹವ್ಯಕ ಸಮುದಾಯವನ್ನು ತಲ್ಲಣಗೊಳಿಸಿತು. ಬ್ರಾಹ್ಮಣ ಸಮುದಾಯದಲ್ಲಿ ವಿಧವಾ ವಿವಾಹವನ್ನು ಪ್ರತಿಪಾದಿಸುತ್ತ ಪ್ರಚಾರಾಂದೋಲನವನ್ನು ಹುಟ್ಟು ಹಾಕಿದ, ಸಮಾಜದಲ್ಲಿ ವಜನು ಇದ್ದ ಸಿರ್ಸಿಯ ಗಣ್ಯ ಅಕದಾಸ ಗಣಪತಿಭಟ್ಟರು ತಾವೇ ವಿಧವೆಯನ್ನು ಮದುವೆಯಾಗಿ ಸನಾತನಿಗಳನ್ನು ಎದುರಿಸಲು ಮುಂದಾಗಿರುವುದು ನಂಬಲಾರದ ಸತ್ಯವಾಗಿತ್ತು.

ಶಿರಸಿ ಸಮೀಪದ ಮಂಜುಗುಣಿಯ ವೆಂಕಟರಮಣ ದೇವಸ್ಥಾನದಲ್ಲಿ ನಡೆದ ಈ ಅಪರೂಪದ ಮದುವೆಗೆ ಅಕದಾಸ ಗಣಪತಿ ಭಟ್ಟರ ಬೆಂಬಲಿಗರು, ಅಭಿಮಾನಿಗಳು ಮಾತ್ರವಲ್ಲದೆ, ಮದುವೆ ಹೇಗೆ ನಡೆಯುತ್ತದೆ ಎಂಬ ಕುತೂಹಲದಿಂದ ಬಂದಿದ್ದ ಸನಾತನಿಗಳೂ ನೆರೆದಿದ್ದರು. ಗುರು–ಮಠಗಳ ಬಹಿಷ್ಕಾರದ ಭೀತಿ ಇದ್ದರೂ, ಮುಂದೆ ಪೌರೋಹಿತ್ಯಕ್ಕೆ ಸಂಚಕಾರ ಒದಗುವ ಸಾಧ್ಯತೆ ಇದ್ದರೂ, ಕೆರೆಕೈ ಸಿದ್ಧಿಗಣಪತಿ ಭಟ್ಟರೆಂಬ ವಿದ್ವಾಂಸರು ದಿಟ್ಟತನದಿಂದ ಆ ವಿಧವಾ ವಿವಾಹವನ್ನು ಶಾಸ್ತ್ರೋಕ್ತವಾಗಿ ನಡೆಸಿಕೊಟ್ಟರು. ಈ ಕ್ರಾಂತಿಕಾರಿ ಲಗ್ನ ಸಾವಿರಾರು ಜನರ ಸಮಕ್ಷಮ ಯಶಸ್ವಿಯಾಗಿ ನಡೆಯಿತು.



ಅಕದಾಸ ಮಹಂಕಾಳಮ್ಮ (80ರ ವಯಸ್ಸಿನಲ್ಲಿ)

ಆ ಮದುವೆಯ ಹಿಂದೆ ಸಾಮಾಜಿಕ ಕಳಕಳಿ ಇದೆ. ಸಮಾಜ ಸುಧಾರಣೆಯ ಶ್ರಮವಿದೆ. ಲಕ್ಷಾಂತರ ಬಾಲ ವಿಧವೆಯರ ಕಣ್ಣೀರ ಕಥೆಯಿದೆ. ಅದರ ಪ್ರಾರಂಭ 600–700 ವರ್ಷಗಳ ಹಿಂದಕ್ಕೆ ಹೋಗುತ್ತದೆ. ಆಂತರಿಕ ಹಾಗೂ ಬಾಹ್ಯ ಆಕ್ರಮಣದ ಭೀತಿಯಿಂದ ಕದಡಿಹೋದ ಸಾಮಾಜಿಕ ಪರಿಸ್ಥಿತಿ ಅಂತರ್ಯುದ್ಧಕ್ಕೆ ಕಾರಣವಾಯಿತು. ಡಕಾಯಿತರ ಆಕ್ರಮಣ, ದುರ್ಬಲ ಕಾನೂನುಗಳ ಅಭದ್ರತೆ, ಮತೀಯ ದಬ್ಬಾಳಿಕೆ ಹಾಗೂ ಮತಾಂತರ ಮೊದಲಾದ ಹಲವು ಕಾರಣಗಳಿಂದ ಬಾಲ್ಯ ವಿವಾಹ ರೂಢಿಗೆ ಬಂತು. 5ರಿಂದ 8 ವರ್ಷಗಳೊಳಗೆ ಲಗ್ನಮಾಡುವುದು ಧರ್ಮವಾಯಿತು. ಹೆಣ್ಣುಮಕ್ಕಳು ರಜಸ್ವಲೆಯಾಗುವುದಕ್ಕಿಂತ ಮೊದಲು ಮದುವೆ ಮಾಡುವುದು ಕರ್ತವ್ಯವಾಯಿತು. ಮದುವೆಗಿಂತ ಮೊದಲು ಮೈ ನೆರೆದ ಹುಡುಗಿಯನ್ನು ಕಣ್ಣು ಕಟ್ಟಿ ಕಾಡಿಗೆ ಬಿಡುವ ಕ್ರೌರ್ಯವೂ ಧರ್ಮಬೀರುಗಳಾದ ಕೆಲವು ಬ್ರಾಹ್ಮಣರಲ್ಲಿ ಆಚರಣೆಯಲ್ಲಿತ್ತು.

(ಸುಮಾರು 300 ವರ್ಷಗಳಷ್ಟು ಹಳೆಯದಾದ 'ಕೋಟಿ ಚನ್ನಯ್ಯ' ತುಳು ಪಾಡ್ದನದಲ್ಲಿ ಬ್ರಾಹ್ಮಣ ಹುಡುಗಿಯಾದ ಕೋಟಿ ಚನ್ನಯ್ಯರ ತಾಯಿಯನ್ನು ಆ ಕಾಲದ ಪದ್ಧತಿಯಂತೆ ಮದುವೆಗೆ ಮುನ್ನ ಮೈ ನೆರೆದಳೆಂದು ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿನಲ್ಲಿ ಬಿಟ್ಟು ಬರುತ್ತಾರೆ. ಅವಳನ್ನು ಬಿಲ್ಲವ ಜಾತಿಯ ಸಾಯನ ಬೈದ್ಯ ರಕ್ಷಿಸಿ ಕರೆತಂದು ಸಾಕುತ್ತಾನೆ. ದೇವರು ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ಪದ್ಧತಿ ಸೃಷ್ಟಿಸಿದ್ದಾನೆ ಎನ್ನುವ ಅವಳ ಮಾತಿಗೆ ಸಾಯನ ವೈದ್ಯ ಹೇಳುತ್ತಾನೆ: 'ಇಂತಹ ಪದ್ಧತಿಗಳು ದೇವರು ಸೃಷ್ಟಿ ಮಾಡಿದ್ದಲ್ಲ. ಮನುಷ್ಯರು ಮಾಡಿಕೊಂಡವು.' ನೋಡಿ: ತುಳು ಪಾಡ್ದನಗಳು. ಡಾ.ಬಿ.ಎ.ವಿವೇಕ ರೈ. ಕರ್ನಾಟಕ ಗಿರಿಜನ ಸಂಸ್ಕೃತಿ. ಪ್ರಕಟಣೆ ಕನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.)

ಬಾಲ್ಯ ವಿವಾಹ ಧರ್ಮಾಚರಣೆಯಾದ ಮೇಲೆ, ಮದುವೆಯೆಂದರೇನು ಎಂಬ ಅರಿವಿಲ್ಲದ ಪುಟ್ಟ ಬಾಲೆಯರು ತಮ್ಮದಲ್ಲದ ತಪ್ಪಿಗೆ ವಿಧವೆಯರಾಗಬೇಕಾಯಿತು. ತಿರ (ತೆರ, ವಧುದಕ್ಷಿಣೆ) ಕೊಟ್ಟು ಮದುವೆಯಾಗಬೇಕಾದ ಆ ಕಾಲದಲ್ಲಿ ಬಡ ಕುಟುಂಬದ ಹುಡುಗಿ ಆಸೆಬುರುಕ ತಂದೆ ತಾಯಿಯರ ಬಲವಂತಕ್ಕೆ ಮುದುಕನ ಕೈ ಹಿಡಿದು ವಿಧವೆಯ ಪಟ್ಟ ಹೊರಬೇಕಾದ ದುರ್ದೆಶೆ ಇತ್ತು. ವೈದ್ಯಕೀಯ ಸೌಲಭ್ಯ ಇರದಿದ್ದ ದಿನಗಳಲ್ಲಿ ಮಲೇರಿಯಾ, ಪ್ಲೇಗ್ ಮೊದಲಾದ ರೋಗಬಾಧೆಯಿಂದ ಯೋಗ್ಯ ಉಪಚಾರ ದೊರೆಯದೆ ಸಾಯುವವರ ಸಂಖ್ಯೆ ಗಣನೀಯವಾಗಿತ್ತು.

1921ರ ಒಂದು ವರದಿ ಪ್ರಕಾರ ಭಾರತದಲ್ಲಿ 15ರಿಂದ 40 ವರ್ಷ ಪ್ರಾಯದ ಸ್ತ್ರೀಯರ ಸಂಖ್ಯೆ 6,11,85,638. ಅದರಲ್ಲಿ 60,71,206 ಮಂದಿ ಮೇಲ್ಜಾತಿಯ ವಿಧವೆಯರಿದ್ದರು. (**Census of India 1921. vol.1. part11 page 46**).

## ಮಾಲೇರು ಯಾರಿವರು?

ಬಾಲ ವಿಧವೆಯರು ವಯಸ್ಸಿಗೆ ನಿಸರ್ಗಸಹಜವಾದ ದೈಹಿಕ ಕಾಮನೆಗೊಳಪಟ್ಟು ಅಥವಾ ಮೋಸ, ಬಲಾತ್ಕಾರಕ್ಕೊಳಪಟ್ಟು ಗರ್ಭಧರಿಸಿದರೆ ಗುರು ಮಠಗಳು ಅವರನ್ನು ಬಹಿಷ್ಕರಿಸಿ ಜಾತಿಯಿಂದ ಹೊರಗಿಡುತ್ತಿದ್ದವು. ಬಂಧುಗಳು ಘಟಶ್ರಾದ್ಧಮಾಡಿ, ಅವರಿಗೆ ತಿಲೋದಕ ತರ್ಪಣ ನೀಡಿ ಅವರನ್ನು ಸತ್ತವರೆಂದು ತಿಳಿಯುತ್ತಿದ್ದರು. ಜಾತಿ ಭ್ರಷ್ಟತೆಯ ಶಿಕ್ಷೆಗೆ ಗುರಿಯಾದ, ವಿಧವೆಯರಿಗೆ ಹುಟ್ಟಿದ ಸಂತತಿಯು ಸಹ ಸಮಾಜ ಬಾಹಿರರಾಗಿ ಬಹಿಷ್ಕಾರದ ಬೇಗೆಯಿಂದ ಬಳಲಬೇಕಾಗಿತ್ತು. ಮೇಲ್ವರ್ಗದಲ್ಲಿ ಬಹಿಷ್ಕೃತರಾದ ಸಂತತಿ 'ಮಾಲೇರು' ಅಥವಾ 'ಗೌಡೇರು' ಎಂಬ ವಿಭಿನ್ನ ಜಾತಿಯಾಯಿತು. ಅವರಿಗೆ ಊರಿನಲ್ಲಿ ವಾಸಿಸುವ ಅವಕಾಶವಿರಲಿಲ್ಲ. ಊರ ಹೊರಗೆ ಗುಡಿಸಲು ಕಟ್ಟಿಕೊಂಡು ವಾಸಿಸಬೇಕಿತ್ತು.

ಗಂಡು ಮಕ್ಕಳು ಶ್ರೀಮಂತ ಕುಟುಂಬದಲ್ಲಿ, ತೋಟದಲ್ಲಿ, ಕೊಟ್ಟಿಗೆಯಲ್ಲಿ ಬಿಟ್ಟಿ ಕೆಲಸ ಮಾಡಿಕೊಂಡು, ಶೂದ್ರ ಆಳುಗಳಂತೆ ಹೊರ ಪಂಕ್ತಿಯಲ್ಲಿ ಉಣ್ಣಬೇಕಿತ್ತು. ಮಾಲೇರ ಜಾತಿಯ ಹೆಣ್ಣುಮಕ್ಕಳಿಗೆ ಲಗ್ನವಿರಲಿಲ್ಲ. ದೇವರಿಗೆ ಧಾರೆ ಎರೆಯುವ ಪದ್ಧತಿ ಇತ್ತು. ದೇವರಿಗೆ ಧಾರೆ ಎರೆದ ಹೆಣ್ಣುಮಕ್ಕಳು ಸಾರ್ವಜನಿಕ ಉಪಯೋಗಕ್ಕೆ ಮೀಸಲಾಗಿದ್ದರು. ಕೆಲವು ಶ್ರೀಮಂತರು ಅವರನ್ನು ಖಾಯಂ ಆಗಿ ಇಟ್ಟುಕೊಳ್ಳುತ್ತಿದ್ದರು. ಅದಕ್ಕೆ ಮನೆ ಯಜಮಾನತಿಯ ಸಮ್ಮತಿಯೂ ಇರುತ್ತಿತ್ತು. ಅವರಿಗೆ ಮಕ್ಕಳು ಆಗುತ್ತಿದ್ದವು. ಇಟ್ಟುಕೊಂಡವಳಿಗೆ ಹೊಟ್ಟೆ ಬಟ್ಟೆಗಳಿಗೆ ಕೊರತೆ ಇರಲಿಲ್ಲ. ಆದರೆ ಎಲ್ಲರಿಗೂ ಆ ಭಾಗ್ಯವಿರಲಿಲ್ಲ. ಬಹುತೇಕರು ಅನುಕೂಲಸ್ಥರ ಮನೆಯಲ್ಲಿ ಊಳಿಗದವರಾಗಿ ಇರಬೇಕಿತ್ತು. ಮನೆ ಯಜಮಾನತಿ ಉಟ್ಟು ಬಿಟ್ಟ, ಸೀರೆ ಕುಪ್ಪಸಗಳೇ ಅವಳ ಉಡುಗೆ. ಗುಡಿಸುವುದು, ಸಾರಿಸುವುದು, ಪಾತ್ರೆ ತೊಳೆಯುವುದು ಮೊದಲಾದ ಮನೆಯೊಳಗಿನ ಕೆಲಸ ಮಾಡಬಹುದಾಗಿದ್ದರೂ ನಂತರ ಗೋಮಯದ ನೀರು ಪ್ರೋಕ್ಷಿಸಿ ಶುದ್ಧೀಕರಿಸಿಕೊಳ್ಳಲಾಗುತ್ತಿತ್ತು.

ಕೆಲ ಮಾಲೇರ ಹೆಂಗಸರಿಗೆ ಜೀವನ ಭದ್ರತೆ ಇರಲಿಲ್ಲ. ಅವರು ಕೂಲಿ ಮಾಡಬೇಕಿತ್ತು. ಕೆಲಸವಿಲ್ಲದ ದಿನಗಳಲ್ಲಿ ಊಟಕ್ಕೆ ಅಕ್ಕಿ ಇಲ್ಲದೆ, ಹಲಸಿನ ಕಾಯಿ, ಮಗೆ ಕಾಯಿಗಳನ್ನು, ಯಾರಾದರೂ ನೀಡಿದ ಹಳಸಲು ಅನ್ನಸಾರನ್ನು ತಿನ್ನಬೇಕಿತ್ತು. ಬ್ರಾಹ್ಮಣ ವಿಧವೆಗೆ ಬ್ರಾಹ್ಮಣರಿಂದಾದ ಮಕ್ಕಳಿಗೆ 'ಗೋಲಕ' ಎಂದು, ಉಳಿದ ಮೇಲ್ವರ್ಗದಿಂದಾದ ಸಂತತಿಗೆ 'ಮಾಲೇರು' ಎಂದು, ಸರಕಾರದ ಪರಿಪತ್ರ ಹೇಳುತ್ತದೆ.